ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು).—

ಅ) ಮಾರ್ಚ್ ೧೯೯೦ರಿಂದ ಇವರೆವಿಗೆ ಬೆಂಗಳೂರು ಉಪ ನೋಂದಣಾಧಿಕಾರಿ ಕಛೇರಿಗಳಲ್ಲಿ ಎಲ್ಲಾ ರೀತಿಯ ಒಟ್ಟು ೩೯,೮೪೪ ದಸ್ತಾವೇಜುಗಳು ನೋಂದಾಯಿಸಲ್ಪಟ್ಟಿರುತ್ತವೆ.

ಆ) ದಸ್ತಾವೇಜು ನೋಂದಾಯಿಸಲು ಬಂದಂತಹ ವ್ಯಕ್ತಿಗಳ ಮನ ಒಲಿಸಿ ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟು ಅಥವಾ ಇಂದಿರಾ ವಿಕಾಸ ಪತ್ರ ಪಡೆಯಲಾಗುತ್ತದೆ.

ಇ) ನೋಂದಣಿಗಾಗಿ ಬರುವ ಸಾರ್ವಜನಿಕರ ಮನ ಒಲಿಸಿ ರೂ. ೧೯,೯೧,೮೭೦ಗಳ ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟ್‌ಗಳು ಹಾಗೂ ರೂ. ೯,೫೩,೭೦೯ ಇಂದಿರಾ ವಿಕಾಸ ಪತ್ರಗಳಲ್ಲಿ ತೊಡಗಿಸಲಾಗಿದೆ.

ಅಕ್ರಮವಾಗಿ ಸಾಗುವಳಿ ಮಾಡುತ್ತಿರುವ ಭೂಮಿಯನ್ನು ಸಕ್ರಮಗೊಳಿಸುವುದರ ಬಗ್ಗೆ

೪೪೬. ಶ್ರೀ ಎ. ನಾಗರಾಜು (ಮಾಲೂರು).—ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಅಕ್ರಮವಾಗಿ ಸಾಗುವಳಿ ಮಾಡುತ್ತಿರುವ ಭೂಮಿಯನ್ನು ಸಕ್ರಮಗೊಳಿಸುವ ಬಗ್ಗೆ ಸರ್ಕಾರದಲ್ಲಿ ಯಾವುದಾದರೂ ಪ್ರಸ್ತಾವನೆಯಿದೆಯೇ ?

ಆ) ಹಾಗಿದ್ದಲ್ಲಿ, ಯಾವಾಗ ಸಕ್ರಮಗೊಳಿಸಲಾಗುವುದು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು).—

ಅ) ಹೌದು.

ಆ) ಕರ್ನಾಟಕ ಭೂ ಕಂದಾಯ ಕಾಯಿದೆ (ತಿದ್ದುಪಡಿ) ಮಸೂದೆ ೧೯೯೦ ಅನ್ನು ಸದನವು ಅಂಗೀಕರಿಸಿದ ನಂತರ ಅದರಂತೆ ಸೂಕ್ತಕ್ರಮ ಕೈಗೊಳ್ಳಲಾಗುವುದು.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳ ಪಟ್ಟಿಯನ್ನು ಮಂಡಿಸಲಾಗಿದೆ.

II. ಅರ್ಜಿಗಳನ್ನೊಪ್ಪಿಸುವುದು

ಶ್ರೀ ಶಿವಾನಂದ ಎಚ್. ಕೌಜಲಗಿ.—ಮಾನ್ಯ ಅಧ್ಯಕ್ಷರೆ, ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿ ಗ್ರಾಮದಲ್ಲಿ ಆದೇ ಕಟ್ಟಡ ಸಾಮಗ್ರಿಗಳನ್ನು ಉಪಯೋಗಿಸಿ ಹೊಸ ಕಟ್ಟಡ ಕಟ್ಟುವ ಬಗ್ಗೆ ಅರ್ಜಿಯನ್ನೂ ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೆ, ಗುಬ್ಬಿ ತಾಲ್ಲೂಕಿನ ಇಡಗೂರು ಗ್ರಾಮದಲ್ಲಿ ಶಿಶುವಿಹಾರ ಮತ್ತು ಅಂಗನವಾಡಿ ಕೇಂದ್ರಗಳನ್ನು ತೆರೆಯುವ ಬಗ್ಗೆ ಅರ್ಜಿಯನ್ನೂ ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಶ್ರೀ ಶಾಂತಿಸಾಗರ ವಿದ್ಯಾಪೀಠ ಇಂಗ್ಲೀಷ್ ಮಾಧ್ಯಮ ಶಾಲೆಯನ್ನು ಈಗಿರುವ ಉಗಾರ ಖೆಡ್ರ್ ಬದಲಾಗಿ ಸಂಕೇಶ್ವರ ತಾಲ್ಲೂಕಿನ ಬನಾಪೂರಕ್ಕೆ ಸ್ಥಳಾಂತರಿಸುವ ಬಗ್ಗೆ ಹಾಗೂ

ಆ) ಸಂಕೇಶ್ವರದಲ್ಲಿ ಸಾರ್ವಜನಿಕರ ಹಾಗೂ ಪ್ರವಾಸಿಗರ ಅನುಕೂಲಕ್ಕಾಗಿ ಪ್ರವಾಸಿ ಮಂದಿರವನ್ನು ಕಟ್ಟಿಸುವ ಬಗ್ಗೆ ಅರ್ಜಿಗಳನ್ನೂ ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು.—ಅರ್ಜಿಗಳನ್ನು ಒಪ್ಪಿಸಲಾಯಿತು.

III. ವರದಿಗಳನ್ನೊಪ್ಪಿಸುವುದು

ಅ) ಶ್ರೀ ಎಂ. ಪಿ. ಕೇಶವಮೂರ್ತಿ.—ಮಾನ್ಯ ಅಧ್ಯಕ್ಷರೆ ಪರಿಶಿಷ್ಟ ಜಾತಿ ವಂಶ್ರ ಪರಿಶಿಷ್ಟ ವರ್ಗಗಳ ಕಲ್ಯಾಣ ಸಮಿತಿಯು ೯ನೇ ವಿಧಾನ ಸಭೆಯ ಮೊದಲನೆಯ ವರದಿಯನ್ನೂ ಸಭೆಗೆ ಒಪ್ಪಿಸುತ್ತೇನೆ.

ಆ) ಶ್ರೀ ಜೌಡರೆಡ್ಡಿ —ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಉದ್ಯಮಗಳ ಸಮಿತಿಯ ಳಿತಿನೇ ಳಿತಿನೇ ಹಾಗೂ ಳಿಳನೇ ವರದಿಗಳನ್ನೂ ಸಭೆಗೆ ಒಪ್ಪಿಸುತ್ತೇನೆ.

ಇ) ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೆ, ಅಧೀನ ಶಾಸನಾ ಸಮಿತಿಯ ೧ಳನೇ ವರದಿಯನ್ನೂ ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು.—ವರದಿಗಳನ್ನೂ ಒಪ್ಪಿಸಲಾಯಿತು.

ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ
ದೂರವಾಣಿ ನೌಕರರು ಮುಷ್ಕರ ಮಾಡುತ್ತಿರುವುದು

† ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ಬಹಳ ಪ್ರಮುಖವಾದ ಸಮಸ್ಯೆಯನ್ನು ನಾನು ಮಾನ್ಯ ಮುಖ್ಯ ಮಂತ್ರಿಗಳ ಮತ್ತು ಸರ್ಕಾರದ ಗಮನಕ್ಕೆ ಈ ಸಂದರ್ಭದಲ್ಲಿ ತರಲಿಚ್ಛಿಸುತ್ತೇನೆ. ಕಳೆದ ಸುಮಾರು ಒಂದು ತಿಂಗಳಿನಿಂದ ದೂರವಾಣಿ ನೌಕರರು ಮುಷ್ಕರ ಮಾಡುತ್ತಿರುವುದರಿಂದ ಎಲ್ಲ ಕೆಲಸಗಳು ಸ್ಥಗಿತವಾಗಿವೆ. ತಹಶೀಲ್ದಾರರು, ಬಿಡಿಓ, ಸರ್ಕಲ್ ಇನ್ಸ್‌ಪೆಕ್ಟರ್, ಡೆಪ್ಯೂಟಿ ಕಮಿಷನರ್‌ಗಳನ್ನೆಲ್ಲ ಭೇಟಿ ಮಾಡಬೇಕೆಂದರೆ ನೀವೇ ಹೋಗಬೇಕಾಗುತ್ತದೆ. ಆದರೂ ಸಹ ಯಾವುದೇ ಕೆಲಸ ಮಾಡತಕ್ಕ ಪರಿಸ್ಥಿತಿಯಲ್ಲಿ ಇಲ್ಲ. ಇದು ಯಾವ ಮಟ್ಟಕ್ಕೆ ಹೋಗುತ್ತಿದೆ ಎಂದರೆ, ಲಾ ಅಂಡ್ ಆರ್ಡರ್ ಪ್ರಾಬ್ಲಂ ಕ್ರಿಯೇಟ್ ಆಗತಕ್ಕ ಸಂಭವ ಇದೆ. ಪಕ್ಕದ ರಾಜ್ಯವಾದ ತಮಿಳುನಾಡಿನಲ್ಲಿ ಕನ್ಸ್ಯೂಮರ್ಸ್ ಫ್ರಿ ಅಂಡ್ ಟಿ ಎಂಪ್ಲಾಯೀಸ್ ವಿರುದ್ಧವಾಗಿ ಹೋರಾಟ ಮಾಡುವುದಕ್ಕೆ ಹೊರಟ್ಟಿದ್ದಾರೆ. ಆ ಪರಿಸ್ಥಿತಿ ನಮ್ಮ ರಾಜ್ಯದಲ್ಲೂ ಬರುವ ಸಂಭವ ಇದೆ. ನಾಳೆ ಪ್ರಧಾನ ಮಂತ್ರಿಯವರು ಬೆಂಗಳೂರಿಗೆ ಬರುವವರಿದ್ದಾರೆಂದು ಪತ್ರಿಕೆಗಳ ಮೂಲಕ ತಿಳಿದಿದ್ದೇನೆ ಈ ಬಗ್ಗೆ ಸರ್ಕಾರ ಇದುವರೆಗೆ ಏನು ಕೆಲಸ ಮಾಡಿದೆ ? ಇದು ರಾಜ್ಯ ಸರ್ಕಾರದವರ ಕೈಯಲ್ಲಿ ಇಲ್ಲವೆಂದು ನಮಗೆ ಅರ್ಥವಾಗುತ್ತಿದೆ. ಆದರೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಪ್ರಧಾನ ಮಂತ್ರಿಗಳ ಜೊತೆಯಲ್ಲಿ ಮುಂಖ್ಯ ಮಂತ್ರಿಗಳು ಮಾತನಾಡಿ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಅಥವಾ ಪರ್ಯಾಯ ವ್ಯವಸ್ಥೆ ಮಾಡುವುದಕ್ಕೆ ಯೋಚನೆ ಮಾಡಬೇಕಾಗುತ್ತದೆ. ಆಗ್ರಾ, ಹೈದ್ರಾಬಾದ್, ಸೆಕ್ಯುಂದರಾಬಾದ್‌ಗಳಲ್ಲಿರತಕ್ಕ ಸರ್ಕಾರ್ಸ್ ಹೇಳಿದ ಹಾಗೆ ಕೇಳಬೇಕು. ತಿವರು ಅನುಕೂಲಗಳನ್ನು ಪಡೆಯಬೇಕು ಎಂದು ಸರ್ಕಾರವನ್ನು ಹೆದರಿಸತಕ್ಕ ಬೆದರಿಸತಕ್ಕ ಪರಿಸ್ಥಿತಿ ಉದ್ಭವವಾಗಿದೆ. ಇದು ಎಲ್ಲರಿಗೂ ಸಂಬಂಧಪಟ್ಟಿದ್ದು. ಇವತ್ತಿನ ದಿವಸ ಇಡೀ ರಾಜ್ಯದ ಕೆಲಸ ಸ್ಥಗಿತವಾಗಿದೆ. ಆಡಳಿತ ಯಂತ್ರ ಸ್ಥಗಿತವಾಗಿದೆ, ಯಾರೂ ಕೆಲಸ ಮಾಡುವುದಕ್ಕಾಗುತ್ತಿಲ್ಲ. ಇವತ್ತಿನ ದಿವಸ ಬೆಲೆಗಳು ಜಾಸ್ತಿಯಾಗುತ್ತಿವೆ. ಏಕೆಂದರೆ ಯಾವ ರೀತಿ ಮಾರ್ಕೆಟ್‌ನಲ್ಲಿ ಬೆಲೆಗಳನ್ನು ಕೆಲವು ಹಿತಾಸಕ್ತಿಗಳು ಏರಿಸುತ್ತಾರೆಂದು ನಿಮಗೆ ಗೊತ್ತಿದೆ, ಪ್ರತಿಯೊಂದರ ಬೆಲೆಯೂ ಜಾಸ್ತಿಯಾಗುತ್ತಿದೆ. ಆದ್ದರಿಂದ ತಕ್ಷಣ ಮುಖ್ಯ ಮಂತ್ರಿಗಳು ಈ ಬಗ್ಗೆ ಹೆಚ್ಚಿನ ಗಮನ ಕೊಟ್ಟು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಒತ್ತಾಯಿಸುತ್ತೇನೆ.

† ಶ್ರೀ ಆರ್. ವಿ. ದೇಶಪಾಂಡೆ,—ಮಾನ್ಯ ಅಧ್ಯಕ್ಷರೆ, ಈಗ್ತಾಗಲೇ ಮಾನ್ಯ ಸಿಂಧ್ಯರವರು ಹೇಳಿದ ಹಾಗೆ ನಾಳೆ ದಿವಸ ಪ್ರಧಾನಿಗಳು ಬೆಂಗಳೂರಿಗೆ ಬರುತ್ತಿದ್ದಾರೆ. ಮುಷ್ಕರ ಮಾಡುವುದು ಪಿ ಅಂಡ್ ಟಿ ಸಿಬ್ಬಂದಿಯವರ ಹಕ್ಕು ಇರಬಹುದು. ಆದರೆ ಉದ್ದೇಶಪೂರ್ವಕವಾಗಿ ಫೋನ್‌ಗಳನ್ನು ಡಿಸ್‌ಕನೆಕ್ಟ್ ಮಾಡುವುದು ಅವರ ಹಕ್ಕು ಅಲ್ಲ. ಇವತ್ತು ನನ್ನ ಫೋನ್ ಕೂಡ ಕೆಲಸ ಮಾಡುತ್ತಿಲ್ಲ. ಮಂತ್ರಿಗಳ ಫೋನ್, ವಿರೋಧ ಪಕ್ಷದ ನಾಯಕರ ಫೋನ್, ಮಂಖ್ಯ ಮಂತ್ರಿಗಳ ಫೋನ್‌ಗಳನ್ನೆಲ್ಲ ಡಿಸ್‌ಕನೆಕ್ಟ್ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಆ ದೃಷ್ಟಿಯಿಂದ ಮಾನ್ಯ ಮುಖ್ಯ ಮಂತ್ರಿಗಳು ಪ್ರಧಾನ ಮಂತ್ರಿಗಳ ಗಮನಕ್ಕೆ ಈ ವಿಚಾರವನ್ನು ತಂದು ಸಮಸ್ಯೆಯನ್ನು ಪರಿಹರಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅವರ ಬೇಡಿಕೆಗಳು ಇದ್ದರೆ ಸಾಲ್ವ್ ಮಾಡಲಿ, ಆದೆಕ್ಕೆ ನಾವು ಬೇಡ ಅನ್ನುವುದಿಲ್ಲ. ಆದರೆ ಅವರು ಈ ರೀತಿ ಹೊಂದರೆ ಮಾಡುವುದು ಸರಿಯಲ್ಲ. ಇವತ್ತಿನ ದಿವಸ ಅವರು ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಲಾಸ್ ಮಾಡಿದ್ದಾರೆ. ಕಮ್ಯೂನಿಕೇಷನ್ ಸ್ಥಗಿತವಾಗಿದೆ. ಆದ್ದರಿಂದ ನಾನು ಮತ್ತೊಮ್ಮೆ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ ಅದಷ್ಟು ಜಾಗ್ರತೆ ಕೇಂದ್ರ ಸರ್ಕಾರದ ಜೊತೆ ಸಂಪರ್ಕ ಮಾಡಿ ಇವರ ವಿರುದ್ಧ ಕಠೋರವಾದ ಕ್ರಮ ಕೈಗೊಳ್ಳುವುದಕ್ಕೆ ಹೇಳಬೇಕು. ನಮ್ಮ ಸರ್ಕಾರಕ್ಕೆ ಏನು ಕೋಟ್ಯಾಂತರ ರೂಪಾಯಿ ಹಾನಿಯಾಗಿದೆ

(† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ,